ನನ್ನ ಕೆಲಸವೇ ಅಂತಿಮಸಂಸ್ಕಾರಗಳದ್ದಾದ್ದರಿಂದ, ಈ ಜಗತ್ತಿನಲ್ಲಿ ದಿನದಿನವೂ ಜರುಗುವ ಸಾವಿರಾರು ಸಾವುಗಳಲ್ಲಿ ಇದೂ ಒಂದೆಂದೆಂಬ ಉದಾಸೀನದ ನಡುವೆಯೇ ದೀಕ್ಷಾಳಿಗೆ, ತಕ್ಷಣ ಕುಣಾಲ ಮೊಹಂತಿಯನ್ನು ಸಂಪರ್ಕಿಸೆಂದು ಆದೇಶಿಸಿದೆ.

'ಕಲೆಕ್ಟ್ ಆಲ್ ದಿ ಡಿಟೇಲ್ಸ್... ಮೃತರು ಯಾರು, ಯಾವ ರೀತಿಯ ಸಂಸ್ಕಾರ ಆಗಬೇಕು ಅಂತ ಕೇಳಿ ತಿಳಕೋ... ಗೋತ್ರ ಸೂತ್ರ ಏನು ಅಂತ ಕಂಡುಕೋ. ಡಿಟೇಲ್ಸ್‌ನೆಲ್ಲ ಹಾಕಿ ಒನ್‌ಡ್ರೈವ್ ಅಪ್ಡೇಟ್ ಮಾಡು... ಕೀಪ್ ದಿ ಟೀಮ್ ರೆಡಿ ಅಂಡ್ ಹ್ಯಾವ್ ಆಲ್ ದಿ ನೆಸೆಸರಿ ಥಿಂಗ್ಸ್ ಡನ್...'

ಯಾವ ರಾಜಕೀಯದ ಯಾವ ನಂಟೋ ಕಾಣೆ ಇದ್ದಕ್ಕಿದ್ದಂತೆ ನನ್ನನ್ನೂ, ನನ್ನ ತಂಡವನ್ನೂ ವಿಶೇಷ ವಿಮಾನದಲ್ಲಿ ಮುಂಬೈಯಿಂದ ಭುವನೇಶ್ವರಕ್ಕೆ ಕೊಂಡೊಯ್ಯಲಾಯಿತು. ಅಲ್ಲಿಂದ ಕಾರಿನಲ್ಲಿ ಕಟಕ್ ನಗರಕ್ಕೆ. ಎಲ್ಲವೂ ಎಷ್ಟು ತರಾತುರಿಯಲ್ಲಿ ಜರುಗಿದವೆಂದರೆ ಪೂರ್ವಾಹ್ನಕ್ಕೂ ಮೊದಲೇ ಭುವನೇಶ್ವರದಲ್ಲಿದ್ದೆ!

## 2

ಹೇಳುವುದಾದರೆ ನನಗೆ ಸಾವು ಮತ್ತು ಅದರ ಸುತ್ತಲಿನ ನಂಬಿಕೆಗಳಿರಲಿ, ಬದುಕು ಮತ್ತು ಅದರೊಡನೆಯ ನಡಾವಳಿಗಳಲ್ಲೂ ಹೆಚ್ಚೇನೂ ಆಸಕ್ತಿಯಿದ್ದಿರಲಿಲ್ಲ. ಅಸಲಿನಲ್ಲಿ, ಇವೊತ್ತಿಗೂ ಹುಡುಗುಬುದ್ಧಿಯ ಉಡಾಫೆ ಮನುಷ್ಯ ನಾನು. ಛಾನ್ಸು ಕೊಟ್ಟರೆ ಈ ಹೊತ್ತಿಗೂ ಹಾಗೇ ಇರಬಯಸುವವನು. ಶಿಸ್ತುಬದ್ಧವಾಗಿರುವುದು ಸಾಮಾನ್ಯರ ಲಕ್ಷಣವೆಂದು ಎಲ್ಲೋ ಓದಿದ ನೆನಪು! ಇನ್ನು, ಐಐಟಿಯಲ್ಲಿ ಓದಿ ಅತ್ಯಾಧುನಿಕವಾಗಿ ಸಂಸ್ಕಾರಗೊಂಡ ನನ್ನ ಮನಸ್ಸು ಸಾವಿನ ಹಿಂದಿನ ಆಚರಣೆಗಳನ್ನು ನಂಬುತ್ತದೆಲ್ಲಿ? ಕಾನ್ಪುರದಲ್ಲಿ ಬೀಟೆಕ್ ಮುಗಿಸಿ, ಸಿಡ್ನಿಯಲ್ಲಿ ಮ್ಯಾನೇಜ್‌ಮೆಂಟ್ ಓದಿ 'ರಿಲಯೆನ್ಸ್'ನಲ್ಲಿ ದೊಡ್ಡ ರಖಮಿನ ಕೆಲಸ ಕೈಕೊಂಡು, ತಿಂಗಳ ಸಂಬಳವನ್ನು ಚೂರೂ ಉಳಿಯಗೊಡದೆ ಬೇಕಾಬಿಟ್ಟಿ ಉಡಾಯಿಸಿಕೊಂಡಿದ್ದ ನಾನು, ಈ 'ಸಂಸ್ಕಾರ್ ರೈಟ್ಸ್' ಎಂಬ ಕಂಪೆನಿಯನ್ನು ಹುಟ್ಟುಹಾಕಿದ್ದೂ ತೀರಾ ಅಚಾನಕ್ಕಾಗಿಯೇ. ಮೃತರ ಸಂಸ್ಕಾರವೆಂಬ ಅಂತ್ಯೇಷ್ಟಿಯ ವಿಧಿವಿಧಾನದ ಮೂಲಕವೂ ದುಡ್ಡು ಮಾಡಬಹುದೆನ್ನುವ ಹುಚ್ಚು ಹುಚ್ಚು ಸಲುವಾಗಿ. ಯಾರೂ ಮಾಡಿರದ 'ಎಂಟರ್‌ಪ್ರೈಸನ್ನು' ನಾನು ಮಾಡಿಯೇನೆಂದು ನನ್ನ ಕೋಟ್ಯಧಿಪತಿ ಅಪ್ಪನಿಗೆ ತೋರಿಕೊಡುವ ಸಲುವಾಗಿ!

ನಿಮ್ಮ ದುಡ್ಡಿನ ಮೇಲಿನ ಕಿಲುಬಿನ ಮುಲಾಜೂ ಇಲ್ಲದೆ ಬದುಕಿಯೇನೆಂದು, ಅಪ್ಪನಿಗೆ ಸವಾಲೆಸೆದು ಬಂದ ಮೇಲೆ, ಯಾರೂ ಮಾಡದ್ದು ಮಾಡಿಯೇನೆಂಬುದನ್ನೇ ನೆಚ್ಚಿ ಹುಟ್ಟಿಕೊಂಡಿದ್ದು ನನ್ನ ಈ 'ಸಂಸ್ಕಾರ್ ರೈಟ್ಸ್'! ಎಲ್ಲಿಯ ಬೀಟೆಕ್ಕು, ಎಲ್ಲಿಯ ಸಂಸ್ಕಾರ! ಸರಿ... ಹೊಸ ಉದ್ದಿಮೆಯ ಸಲುವಾಗಿ ಸಂಸ್ಕೃತವನ್ನು ಕಲಿತೆ. ವೇದೋಪನಿಷತ್ತನ್ನು ಓದಿ ಪಠಿಸಿ ಅರಿತೆ. ಅರಿತರಿತು ನುರಿತೆ ಮತ್ತು ನುರಿನುರಿತು ಅರಿತೆ!! ಇದೇ ಮೇರೆಗೆ, ಜನಿವಾರವನ್ನು ಎಡಕ್ಕೂ ಬಲಕ್ಕೂ ಹಾಕಿಕೊಳ್ಳುವುದನ್ನು 'ಸವ್ಯ–ಅಪಸವ್ಯ'ವೆಂದು ಕಲಿತೆ. ನಿವೀತ, ಪ್ರಾಚೀನಾವೀತ... ಯಜ್ಞೋಪವೀತವೆಂದೆಲ್ಲ ಅರ್ಥೈಸಿಕೊಂಡೆ. ಮಂತ್ರಘೋಷಗಳ ಸ್ಪಷ್ಟ ಶುಚಿರ್ಭೂತ ಉಚ್ಚಾರಣೆಯನ್ನೆಲ್ಲ ಅರ್ಥಸಹಿತವಾಗಿ ನಾಲಿಗೆಗೆ ಒಗ್ಗಿಸಿಕೊಂಡೆ. ಒಟ್ಟಿನಲ್ಲಿ ಶಾಸ್ತ್ರೋಕ್ತವಾದ 'ಅರ್ಥ'ವೇ ಈ ಬದುಕಿನ ಅರ್ಥಾರ್ಥವಾಗಿಬಿಟ್ಟಿತು!

## 3

'ಸಂಸ್ಕಾರ್ ರೈಟ್ಸ್'ನ ಹುಟ್ಟುಂಟಾಗಿದ್ದು ಎರಡು ಸಾವಿರದ ಐದನೇ ಇಸವಿಯಲ್ಲಿ. ನಾನು ಹುಟ್ಟಿದ್ದು ನೈನ್‌ಟೀನ್ ಸೆವೆಂಟಿ ಒನ್; ಅಂದರೆ ನನ್ನ ಮೂವತ್ತೈದನೇ ವಯಸ್ಸಿನಲ್ಲಿ ನಾನು ಈ ಉದ್ದಿಮೆಗೆ ಬಂದಿದ್ದು. ಖುದ್ದಾಗಿ ಈ ಉದ್ದಿಮೆಯನ್ನು ತೆರೆದಿದ್ದು. ಈ ಹೊತ್ತಿಗಾಗಲೇ ನನ್ನ ಬದುಕಿನಲ್ಲಿ ಒಂದೆರಡು